ಅ) ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ಸೇರಿದ್ದ 'ಡಿ' ಪಾಳ್ಯ ಹೋಬಳಿಯ ರಾಜ್ಯದ ಗಡಿಭಾಗಕ್ಕೆ ಸೇರಿದ್ದು ನಕ್ಸಲೀಯರಿಂದ ಸುತ್ತಮುತ್ತಲಿನ ಜನರಿಗೆ ರಕ್ಷಣೆ ನೀಡಲು ಹೊಸ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ (ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ) ಇಲ್ಲ

ಠಾಣೆ ತೆರೆಯುವ ಅಗತ್ಯತೆ ಕಂಡುಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು.

ಚಿಕ್ಕಬಳ್ಳಾಪುರ ನಗರಕ್ಕೆ ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆ

735(1125) ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ವಿ. (ಚಿಕ್ಕಬಳ್ಳಾಪುರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ನಗರಕ್ಕೆ ಕುಡಿಯುರ ನೀರನ್ನು ಒದಗಿಸುತ್ತಿದ್ದ ಜಕ್ಕಲ ಮಡಗು ಜಲಾಶಯ ಒಣಗಿಹೋಗಿರುವುದರಿಂದ ಸರ್ಕಾರದವರು ತುರ್ತಾಗಿ ಕೊಳವೆ ಬಾವಿಗಳನ್ನು ತೋಡಿಸಿ ನೀರು ಪೂರೈಕೆಗೆ ಕ್ರಮ ಕೈಗೊಳ್ಳುವರೆ?

ಆ) ಚಿಕ್ಕಬಳ್ಳಾಪುರ ನಗರ ಸಭೆಯಾಗಿ ಪರಿವರ್ತನೆಗೊಂಡಿರುವುದರಿಂದ ನಗರ ನೈರ್ಮಲ್ಯಕ್ಕೆ ಒಳಚರಂಡಿ ಯೋಜನೆ ಕಲ್ಪಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ? (ವಿವರ ನೀಡುವುದು)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು)

ಅ) ಚಿಕ್ಕಬಳ್ಳಾಪುರ ನಗರದ ಕುಡಿಯುವ ನೀರಿನ ಮೂಲವಾಗಿರುವ ಚಿಕ್ಕಲಮಡಗು ಜಲಾಶಯ ಮಳೆಯ ವೈಫಲ್ಯದಿಂದ ಬರಿದಾಗಿದ್ದು, ನೀರಿನ ಸಮಸ್ಯೆ ಉದ್ಭವಿಸುವ ಸಾಧ್ಯತೆ ಮನಗಂಡು ನಗರಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ರೂ. 34.10 ಲಕ್ಷಗಳ ಅಂದಾಜನ್ನು ತಯಾರಿಸಿದ್ದು ದಿನಾಂಕ: 16.12.2002ರಲ್ಲಿ ಹಣ ಬಿಡುಗಡೆಗಾಗಿ ಜಿಲ್ಲಾಧಿಕಾರಿಗಳು ಕೋಲಾರ ಇವರನ್ನು ಕೋರಲಾಗಿ ಜಿಲ್ಲಾಧಿಕಾರಿ ಕೋಲಾರಅವರು ರೂ. 16.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, 10 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಹಾಲಿ ಇರುವ ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪ್ ಅಳವಡಿಸುವುದು, ಕೊಳವೆ ಬಾವಿಗಳ ಆಳ ವೃದ್ಧಿಸುವುದು ಹಾಗೂಪಿವಿಸಿ ಕೊಳವೆಗಳನ್ನು ಅಳವಡಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿದೆ.

ಆ) ಚಿಕ್ಕಬಳ್ಳಾಪುರ ನಗರಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು, ಪ್ರಸ್ತಾವನೆ ಇದೆ. ಸರ್ವೆ ಕೆಲಸ ಮಾಡಲು ರೂ. 6.60 ಲಕ್ಷಗಳನ್ನು ನಗರಸಭೆ ಚಿಕ್ಕಬಳ್ಳಾಪುರ ಬಿಡುಗಡೆ ಮಾಡಬೇಕಾಗಿದೆ. ಹಣ ಬಿಡುಗಡೆಯಾದ ನಂತರ ಸರ್ವೆ ಕೆಲಸ ಕೈಗೆತ್ತಿಕೊಂಡು ವಿವರವಾದ ಅಂದಾಜನ್ನು ತಯಾರಿಸಿ ನಂತರ ಮುಂದಿನ ಕ್ರಮ ಜರುಗಿಸಲಾಗುವುದು.

ಹುಕ್ಕೇರಿ ತಾಲ್ಲೂಕಿನ ಸಲಾಮವಾಡಿ ಏತ ನೀರಾವರಿ ಯೋಜನೆ

736(552) ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ್ (ಸಂಕೇಶ್ವರ್) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಲಾಮವಾಡಿ ಏತ ನೀರಾವರಿ ಯೋಜನೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಆ) ಈ ಯೋಜನೆಗೆ ಆಯವ್ಯಯದಲ್ಲಿ ಒದಗಿಸಿರುವ ಹಣವೆಷ್ಟು?